2019 ನನ್ನ ವೃತ್ತಿಜೀವನದಲ್ಲಿಯೇ ಸ್ಪೆಷಲ್ ವರ್ಷ. ಈ ವರ್ಷ ನನ್ನ ಎಂಟು ಸಿನಿಮಾಗಳು ಬಿಡುಗಡೆಯಾಗುತ್ತಿವೆ. ವರ್ಷದ ಆರಂಭವಾಗಿದ್ದೇ 'ಬೆಲ್ ಬಾಟಂ' ಸಿನಿಮಾ ಮೂಲಕ. ಇದು ರೆಟ್ರೊ ಶೈಲಿ ಸಿನಿಮಾ. ನೂರು ದಿನ ಮುಗಿಸಿ 125ನೇ ದಿನದತ್ತ ಹೋಗ್ತಾ ಇದೆ. ನಂತರ ಬಂದ 'ಸೂಜಿದಾರ' ಕಲಾತ್ಮಕ ಸಿನಿಮಾ. ಇತ್ತೀಚೆಗೆ ಬಿಡುಗಡೆಯಾದ 'ಡಾ/ ಆಫ್ ಪಾರ್ವತಮ್ಮ' ಇನ್ವೆಸ್ಟಿಗೇಶನ್ ಸಿನಿಮಾ. ಹೀಗೆ ಮೂರು ಬೇರೆ ಬೇರೆ ಪಾತ್ರಗಳಲ್ಲಿಯೂ ನನ್ನ ನಟನೆಗೆ ಮೆಚ್ಚುಗೆ ವ್ಯಕ್ತವಾದವು. ಮುಂದಿನ ಆರು ತಿಂಗಳಲ್ಲಿ ಐದು ಸಿನಿಮಾಗಳು ಬಿಡುಗಡೆಯಾಗುತ್ತಿವೆ. 'ಕುರುಕ್ಷೇತ್ರ', 'ಬಿಚ್ಚುಗತ್ತಿ', 'ಎಲ್ಲಿದ್ದೆ ಇಲ್ಲೀತನಕ', 'ಕಥಾಸಂಗಮ,' 'ಕನ್ನಡ್ ಗೊತ್ತಿಲ್ಲ' ಎಲ್ಲವೂ ಒಂದಕ್ಕಿಂತ ಒಂದು ಭಿನ್ನ ಸಿನಿಮಾಗಳು. ಹಾಗಾಗಿ ಮುಂದಿನ ಆರು ತಿಂಗಳೂ ಇಷ್ಟೇ ಖುಷಿ ಕೊಡುತ್ತದೆ ಎಂಬ ವಿಶ್ವಾಸ ಇದೆ.

**-ಹರಿಪ್ರಿಯಾ, ನಟಿ**



'ಸಲಗ' ಸಿನಿಮಾದಲ್ಲಿ ವಿಜಯ್, ಧನಂಜಯ್



2019ರ ಮೊದಲಾರ್ಧ ನನ್ನ ಮಟ್ಟಿಗೆ ಅವಿಸ್ಮರಣೀಯ. ನಾನು ಮೊದಲ ಬಾರಿಗೆ ನಾಯಕನಾಗಿ ನಟಿಸಿದ 'ಬೆಲ್ ಬಾಟಂ' ಅನ್ನು ಜನರು ತುಂಬ ಪ್ರೀತಿಯಿಂದ ಸ್ವೀಕರಿಸಿದರು. ಮಾಮೂಲಿ ಫೈಟ್, ಲವ್‌ಗಳ ಸಿದ್ಧ ಸೂತ್ರವನ್ನು ಮೀರಿದ ಕಮರ್ಷಿಯಲ್ ಸಿನಿಮಾ ಎಂಬ ಕಾರಣಕ್ಕಾಗಿಯೇ ನಾನು ಈ ಪಾತ್ರವನ್ನು ಒಪ್ಪಿಕೊಂಡಿದ್ದೆ. ಅದು ಜನರಿಗೂ ಇಷ್ಟವಾಯ್ತು. ಈ ಚಿತ್ರ ನನಗೆ ನಟನಾಗಿ ಮುಂದುವರಿಯಲು ಧೈರ್ಯ ಕೊಟ್ಟಿದೆ. ನಾನು ಇನ್ನು ಮುಂದೆ ಮಾಡುವ ಸಿನಿಮಾಗಳೂ ಹೀಗೆಯೇ ಮಾಮೂಲಿ ಜಾಡನ್ನು ಮೀರಿ, ಪಾತ್ರ ಮತ್ತು ಕಥೆಗೇ ಒತ್ತುಕೊಡುತ್ತವೆ ಎಂದು ಭರವಸೆ ನೀಡಬಲ್ಲೆ.

ಮುಂದೆ ಏನಾಗುತ್ತದೆ ಎಂದು ಜಡ್ಜ್ ಮಾಡುವುದು ಕಷ್ಟ. ಕಳೆದ ಕೆಲವು ವರ್ಷಗಳಿಂದ ನಮ್ಮಲ್ಲಿ ಸ್ಟಾರ್ ಸಿನಿಮಾಗಳು ವಿರಳವಾಗಿ ಬರುತ್ತಿದ್ದವು. ಆದರೆ ಈ ವರ್ಷದ ದ್ವಿತೀಯಾರ್ಧದಲ್ಲಿ 'ಅವನೇ ಶ್ರೀಮನ್ನಾರಾಯಣ', 'ಕುರುಕ್ಷೇತ್ರ', 'ಪೈಲ್ವಾನ' ಹೀಗೆ ಹಲವು ಸ್ಟಾರ್ ಸಿನಿಮಾಗಳು ಬಿಡುಗಡೆಯಾಗಲಿವೆ. 'ಕೆಜಿಎಫ್ 2' ಕೂಡ ಬರಬಹುದು. ಇದರಿಂದ ಕನ್ನಡ ಚಿತ್ರರಂಗದ ಬಗ್ಗೆ ಬೇರೆ ಕಡೆಗಳಲ್ಲಿಯೂ ಕುತೂಹಲ ಹುಟ್ಟಿಕೊಂಡಿರುವುದಂತೂ ಸತ್ಯ. ಜೊತೆಗೆ ಕನ್ನಡದ ಪ್ರೇಕ್ಷಕರೇ ಚಿತ್ರಮಂದಿರದತ್ತ ಮರಳಿ ಸಿನಿಮಾ ಸಂಸ್ಕೃತಿ ಬೆಳೆಸುವ ಕೆಲಸ ಆಗುತ್ತದೆ ಎಂಬ ನಂಬಿಕೆ ಇದೆ.

**-ರಿಷಭ್ ಶೆಟ್ಟಿ**
ನಟ, ನಿರ್ದೇಶಕ

ಮಲಯಾಳಂನಲ್ಲಿ ಮೋಹನ್‌ಲಾಲ್, ಹಿಂದಿಯಲ್ಲಿ ಸುನಿಲ್ ಶೆಟ್ಟಿ ಬಿಡುಗಡೆ ಮಾಡಿದ್ದಾರೆ. ಕನ್ನಡದ ಪೈಲ್ವಾನನ ಪೋಸ್ಟರನ್ನು ಸ್ವತಃ ಸುದೀಪ್ ಅವರೇ ಬಿಡುಗಡೆ ಮಾಡಿದ್ದಾರೆ.

ವರಮಹಾಲಕ್ಷ್ಮಿ ಹಬ್ಬದ ದಿನದಂದು 'ಪೈಲ್ವಾನ' ತೆರೆಕಾಣಲಿದ್ದಾರೆ. ಈ ಜಟ್ಟಿಗೆ ಸ್ಪರ್ಧೆಯೇನೂ ಕಡಿಮೆಯಿಲ್ಲ. ಅದೇ ದಿನ 'ಕುರುಕ್ಷೇತ್ರ' ಚಿತ್ರ ಕೂಡ ಲಕ್ಷ್ಮೀ ಕಟಾಕ್ಷವನ್ನು ಹಂಬಲಿಸಿ ಬಿಡುಗಡೆಯಾಗುತ್ತಿದೆ. ಮುನಿರತ್ನ ನಿರ್ಮಾಣದ, ನಾಗಣ್ಣ ನಿರ್ದೇಶನದ ಭಾರೀ ಬಜೆಟ್, ಗ್ರಾಫಿಕ್‌ನ ಗಿಮಿಕ್ ಹಾಗೂ ಬಹು ತಾರಾಗಣದಿಂದಾಗಿ ಗಮನಸೆಳೆದಿರುವ ಚಿತ್ರ. ದುರ್ಯೋಧನನ ಪಾತ್ರದಲ್ಲಿ ನಟಿಸಿರುವ ದರ್ಶನ್ ಚಿತ್ರದ ಹೈಲೈಟ್. ಪೌರಾಣಿಕ–ಐತಿಹಾಸಿಕ ಕಥೆಗಳ ಬಗ್ಗೆ ದರ್ಶನ್‌ಗೆ ವಿಶೇಷ ಒಲವಿದ್ದು, ಕುರುಕ್ಷೇತ್ರ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಯಿದೆ. ಮಣಗಟ್ಟಲೆ ಒಡವೆಗಳನ್ನು ಹೇರಿಕೊಂಡು ನಟಿಸಿರುವ ದರ್ಶನ್, ತಮ್ಮ ಶ್ರಮಕ್ಕೆ ತಕ್ಕ ಫಲ ದೊರೆಯುವ ಬಗ್ಗೆ ವಿಶ್ವಾಸದಿಂದ ಇದ್ದಾರೆ.

2019ರ ಯಶಸ್ವಿ ಚಿತ್ರಗಳಲ್ಲೊಂದಾದ 'ಯಜಮಾನ'ನ ಗೆಲುವು ಕೂಡ 'ಕುರುಕ್ಷೇತ್ರ' ಚಿತ್ರದ ಬೆನ್ನಿಗಿದೆ. ಅಷ್ಟುಮಾತ್ರವಲ್ಲ, ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಯಶ್ ಜೊತೆಗೂಡಿ ಸುಮಲತಾ ಅವರನ್ನು ಗೆಲ್ಲಿಸಲಿಕ್ಕೆ ದರ್ಶನ್ ಊರೂರು ಸುತ್ತಿರುವುದು ಕೂಡ ಅವರ ಜನಪ್ರಿಯತೆಯ ಹೊಳಪನ್ನು ಹೆಚ್ಚಿಸಿದ್ದು, ಆ ಪ್ರಭಾವಳಿ ಕೂಡ 'ಕುರುಕ್ಷೇತ್ರ' ಚಿತ್ರಕ್ಕೆ ಒಳ್ಳೆಯ ಓಪನಿಂಗ್ ದೊರಕಿಸಲು ಕಾರಣಗಳಲ್ಲೊಂದಾಗಬಹುದು. ಮಂಡ್ಯದ ಗೆಲುವಿನ ಗರ ಮುಂದುವರೆಯುತ್ತದೆಯೇ ಎನ್ನುವುದು ಸದ್ಯದ ಕುತೂಹಲ. ಪೈಲ್ವಾನನಂತೆ 'ಕುರುಕ್ಷೇತ್ರ' ಕೂಡ ಬಹುಭಾಷೆಗಳಲ್ಲಿ ತೆರೆಕಾಣಲಿದೆ.

'ಕುರುಕ್ಷೇತ್ರ'ದ ಬೆನ್ನಿಗೆ ದರ್ಶನ್‌ರ 'ಒಡೆಯ' ತೆರೆಕಾಣುವ ಉಮೇದಿನಲ್ಲಿದೆ. 'ಬುಲ್ ಬುಲ್' ನಂತರ ಎಂ.ಡಿ. ಶ್ರೀಧರ್ ನಿರ್ದೇಶಿಸಿರುವ ದರ್ಶನ್‌ರ 'ಒಡೆಯ', ಹೆಸರಿಗೆ ತಕ್ಕಂತೆ ಕಥಾನಾಯಕನ ಶೌರ್ಯಸಾಹಸಗಳನ್ನು ಬಣ್ಣಿಸುವ ಸಿನಿಮಾ.

## ನಾರಾಯಣನ ಲೀಲಾವಿನೋದ

2019ರ ಇಂಟರ್ವಲ್ ನಂತರದಲ್ಲಿನ ಮತ್ತೊಂದು ಬಹು ನಿರೀಕ್ಷಿತ ಚಿತ್ರ – 'ಅವನೇ ಶ್ರೀಮನ್ನಾರಾಯಣ'. ಸಚಿನ್ ರವಿ ನಿರ್ದೇಶನದ ಈ ಚಿತ್ರದಲ್ಲಿ ರಕ್ಷಿತ್ ಶೆಟ್ಟಿ ಅವರೇ ನಾರಾಯಣ. 'ಕಿರಿಕ್ ಪಾರ್ಟಿ'ಯ ಅಭೂತಪೂರ್ವ ಗೆಲುವಿನ ಮೂರು ವರ್ಷಗಳ ನಂತರ 'ಶ್ರೀಮನ್ನಾರಾಯಣ' ಪ್ರೇಕ್ಷಕರ ಎದುರು ಬರುತ್ತಿದೆ. ಈ ನಡುವೆ, ಲೋಕದಲ್ಲಿ ಏನೆಲ್ಲ ಲೀಲಾವಿನೋದ ಸಂಭವಿಸಿದೆ. ಸ್ವತಃ ರಕ್ಷಿತ್ ಅವರೇ ನಿಶ್ಚಿತಾರ್ಥದ ಉಂಗುರ ಕಳೆದುಕೊಂಡಿದ್ದಾರೆ. 'ಕಿರಿಕ್ ಪಾರ್ಟಿ'ಯ ರಶ್ಮಿಕಾ ಮಂದಣ್ಣ ತೆಲುಗು–ತಮಿಳುಗಳಲ್ಲಿ ರೆಡ್ ಕಾರ್ಪೆಟ್ ಮೇಲೆ ನಡೆಯುತ್ತಾ ದಕ್ಷಿಣ ಭಾರತದ ಮುಂಚೂಣಿ ನಾಯಕಿಯರಲ್ಲೊಬ್ಬರಾಗಿ ಗುರ್ತಿಸಿಕೊಂಡಿದ್ದರೆ, ರಕ್ಷಿತ್ ಮಾತ್ರ ತಮ್ಮ ಎಂದಿನ ಅಸಡಾ ಬಸಡಾ ನಗು ತುಳುಕಿಸುತ್ತ ನಾರಾಯಣನ ಅವತಾರ ಎತ್ತಿದ್ದಾರೆ. ಯಾವ ಯಾವುದೋ ಕಾರಣಕ್ಕೆ ಸಾಮಾಜಿಕ ಜಾಲತಾಣಗಳಿಗೆ ಬೆನ್ನುಹಾಕಿದ್ದ ಅವರು, ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ 'ಸಿನಿಮಾ ರೆಡಿಯಾದಾಗ ಸೋಷಿಯಲ್ ಮೀಡಿಯಾ' ಎನ್ನುವ ಮಂತ್ರ ಜಪಿಸುತ್ತಿದ್ದಾರೆ. ಅದೇನೇ ಇರಲಿ, ಕಿರಿಕ್ ಪಾರ್ಟಿಯ ಯಶಸ್ಸು ಹಾಗೂ ಮೂರು ವರ್ಷಗಳ ಅಂತರ – ಇವೆರಡು ಸಂಗತಿಗಳೇ ಸಾಕು, ರಕ್ಷಿತ್‌ರ ಚಿತ್ರದ ಬಗ್ಗೆ ಅಭಿಮಾನಿಗಳಲ್ಲಿ ನಿರೀಕ್ಷೆಯ ಜ್ವರ ಹೆಚ್ಚಿಸಲು. 'ರಾಕ್ಷಸನನ್ನು ಕೊಲ್ಲಲು ನಮ್ಮೊಳಗಿನ ರಾಕ್ಷಸನನ್ನು ಮೊದಲು ಕೊಲ್ಲಬೇಕು' ಎನ್ನುವ ಟೀಸರ್‌ನಲ್ಲಿನ ಡೈಲಾಗ್ ನೋಡಿದರೆ, ಈ ನಾರಾಯಣ ಕಾಯುವ ಬದಲು ಕೊಲ್ಲುವುದನ್ನೇ ಕಾಯಕ ಮಾಡಿಕೊಂಡಿರಬಹುದೆನ್ನಿಸುತ್ತದೆ. ಈ ನಾರಾಯಣನಿಗೆ ಶಾನ್ವಿ ಶ್ರೀವಾತ್ಸವ್ ಜೋಡಿಯಾಗಿ